ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1225

ಉತ್ತರಿಸಬೇಕಾದ ದಿನಾಂಕ : 17.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ		ಉತ್ತರಗಳು
ಅ	2019-20 ಹಾಗೂ 2020-21 ನೇ ಸಾಲಿನಲ್ಲಿ ಕಾರವಾರ ಜಿಲ್ಲೆಯಲ್ಲಿ ಪಶುಸಂಗೋಪನೆ ಅಭಿವೃದ್ಧಿಗೆ ಘೋಷಿಸಿದ ಹಣವೆಷ್ಟು; ಆ ಪೈಕಿ ಬಿಡುಗಡೆಯಾದ ಹಾಗೂ ಖರ್ಚಾದ ಹಣವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)	2019-20 ಮತ್ತು 2020-21ನೇ ಸಾಲುಗಳಲ್ಲಿ ಕಾರವಾರ ಜಿಲ್ಲೆಯಲ್ಲಿ ಪಶುಸಂಗೋಪನೆ ಅಭಿವೃದ್ಧಿಗೆ ನಿಗದಿಯಾದ, ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರಗಳ ಕ್ರಮವಾಗಿ ಕೆಳಗಿನಂತಿವೆ.

ವರ್ಷ	ತಾಲೂಕು	ವಾರ್ಷಿಕ ಅನುದಾನ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ಖರ್ಚಾದ ಅನುದಾನ (ರೂ.ಲಕ್ಷಗಳಲ್ಲಿ)
2019-20 (ರಾಜ್ಯವಲಯ ಮತ್ತು ಜಿಲ್ಲಾ ಪಂಚಾಯತ ಹಾಗೂ ತಾಲೂಕು ಪಂಚಾಯತ ಸೇರಿಸಿ)	ಅಂಕೋಲಾ	131.01	131.01	129.09
	ಭಟ್ಕಳ	96.11	96.11	94.97
	ಹಳಿಯಾಳ	235.55	235.55	225.22
	ಹೊನ್ನಾವರ	187.24	187.24	173.1
	ಕಾರವಾರ	202.4	202.4	192.59
	ಕುಮಟಾ	185.34	185.34	180.52
	ಮುಂಡಗೋಡ	233.47	233.47	220.57
	ಶಿರಸಿ	376.13	376.13	355.86
	ಸಿದ್ದಾಪುರ	209.48	209.48	207.11
	ಯಲ್ಲಾಪುರ	254.366	254.366	252.356
	ಜೋಯಿಡಾ	114.91	114.91	103.29
ಒಟ್ಟು		**2226.006**	**2226.006**	**2134.676**

ವರ್ಷ	ತಾಲೂಕು	ವಾರ್ಷಿಕ ಅನುದಾನ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ಖರ್ಚಾದ ಅನುದಾನ (ರೂ.ಲಕ್ಷಗಳಲ್ಲಿ)
2020-21 (ಫೆಬ್ರುವರಿ-21 ಅಂತ್ಯಕ್ಕೆ) (ರಾಜ್ಯವಲಯ ಮತ್ತು ಜಿಲ್ಲಾ ಪಂಚಾಯತ ಹಾಗೂ ತಾಲೂಕು ಪಂಚಾಯತ ಸೇರಿಸಿ)	ಅಂಕೋಲಾ	128.95	128.95	105.44
	ಭಟ್ಕಳ	88.83	88.83	81.63
	ಹಳಿಯಾಳ	234.89	234.89	200.4
	ಹೊನ್ನಾವರ	157.98	157.98	148.89
	ಕಾರವಾರ	169.64	169.64	129.95
	ಕುಮಟಾ	160.07	160.07	130.74
	ಮುಂಡಗೋಡ	221.34	221.34	189
	ಶಿರಸಿ	324.15	324.15	300.61
	ಸಿದ್ದಾಪುರ	193.47	193.47	172.88
	ಯಲ್ಲಾಪುರ	201.75	201.75	195.61
	ಜೋಯಿಡಾ	131.63	131.63	83.77
ಒಟ್ಟು		**2012.7**	**2012.7**	**1738.92**

<table>
<tr>
<td>ಆ</td>
<td>ಹಸು, ಹಂದಿ, ಕುರಿ,ಆಡು, ಮೊಲ ಸಾಕಾಣಿಕೆ ಮತ್ತು ಕುಕ್ಕುಟೋದ್ಯಮ ಇತ್ಯಾದಿಗಳಿಗೆ ಕಳೆದ ಎರಡು ವರ್ಷಗಳಲ್ಲಿ ಖರ್ಚಾದ ಹಣವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)</td>
<td>
<table>
<tr><th rowspan="3">ತಾಲೂಕು</th><th colspan="2">ಖರ್ಚಾದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><th colspan="2">ವರ್ಷ</th></tr>
<tr><th>2019–2020</th><th>2020–21 (ಫೆಬ್ರುವರಿ–21ರ ಅಂತ್ಯಕ್ಕೆ)</th></tr>
<tr><td>ಅಂಕೋಲಾ</td><td>2.78</td><td>0.594</td></tr>
<tr><td>ಭಟ್ಕಳ</td><td>4.26</td><td>0</td></tr>
<tr><td>ಹಳಿಯಾಳ</td><td>7.48</td><td>4.698</td></tr>
<tr><td>ಹೊನ್ನಾವರ</td><td>3.57</td><td>0</td></tr>
<tr><td>ಕಾರವಾರ</td><td>1.7</td><td>1.161</td></tr>
<tr><td>ಕುಮಟಾ</td><td>2.678</td><td>0.594</td></tr>
<tr><td>ಮುಂಡಗೋಡ</td><td>8.32</td><td>1.782</td></tr>
<tr><td>ಸಿದ್ದಾಪುರ</td><td>3.8</td><td>1.188</td></tr>
<tr><td>ಶಿರಸಿ</td><td>6.13</td><td>2.97</td></tr>
<tr><td>ಜೋಯಿಡಾ</td><td>2.33</td><td>2.349</td></tr>
<tr><td>ಯಲ್ಲಾಪುರ</td><td>4.63</td><td>2.349</td></tr>
<tr><td>ಒಟ್ಟು</td><td>47.678</td><td>17.685</td></tr>
</table>
</td>
</tr>
<tr>
<td>ಇ</td>
<td>ಹಸು ಸತ್ತರೆ ಸಿಗುವ ಪರಿಹಾರ ಎಮ್ಮೆ ಸತ್ತರೆ ಸಿಗುವುದಿಲ್ಲ ಎನ್ನುವ ರಾಜ್ಯದ ಜಾನುವಾರು ಸಾಕುವವರ ಕೂಗು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು</td>
<td>ರಾಸುಗಳ ಮರಣ ಪರಿಹಾರಧನ ಯೋಜನೆಯಲ್ಲಿ ಹಸು ಮತ್ತು ಎಮ್ಮೆ ಎರಡು ಬಗೆಯ ಜಾನುವಾರುಗಳಿಗೆ ಪರಿಹಾರಧನ ಯೋಜನೆ ಅನ್ವಯವಾಗುತ್ತದೆ. 2017–18 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ:81: ಪಪಾಯೋ:2017, ದಿನಾಂಕ:28.10.2017 ರಂತೆ, ವಿಮೆಗೊಳಪಡದ ಎತ್ತು/ಹಸು/ಹೋರಿ/ಕೋಣ/ಎಮ್ಮೆ/ಕಡಸು/ಮಣಕಗಳು (ಆರು ತಿಂಗಳು ಮೇಲ್ಪಟ್ಟು), ಮೃತಪಟ್ಟ ಸಂದರ್ಭದಲ್ಲಿ ಮಾರುಕಟ್ಟೆ ಮೌಲ್ಯದನುಸಾರ ಗರಿಷ್ಠ ರೂ.10000/– ಮಿತಿಯೊಳಗೆ ಪರಿಹಾರಧನ ನೀಡುವ ಅವಕಾಶವಿದ್ದು, 2020–21ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ.</td>
</tr>
<tr>
<td>ಈ</td>
<td>ಗ್ರಾಮೀಣ ಪ್ರದೇಶದ ರೈತರಿಗೆ ಮತ್ತು ನಿರುದ್ಯೋಗಿ ಯುವಕರಿಗೆ ಪಶುಸಂಗೋಪನೆಯ ತರಬೇತಿ ಮತ್ತು ಸಹಾಯಧನ ಮುಂತಾದ ಪ್ರೋತ್ಸಾಹ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)</td>
<td>ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯಡಿ, ಗ್ರಾಮೀಣ ಪ್ರದೇಶದ ರೈತರಿಗೆ ಮತ್ತು ನಿರುದ್ಯೋಗಿ ಯುವಕರಿಗೆ ಮೈತ್ರಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ರೈತರ ಮನೆ ಬಾಗಿಲಿಗೆ ಮೈತ್ರಿ ಕಾರ್ಯಕರ್ತರು ತೆರಳಿ ಜಾನುವಾರುಗಳಿಗೆ ಕೃತಕ ಗರ್ಭಧಾರಣೆಯನ್ನು ಕೈಗೊಳ್ಳುವ ಕುರಿತು ತರಬೇತಿಯನ್ನು ನೀಡಲಾಗುತ್ತಿದೆ, 3 ತಿಂಗಳು ತರಬೇತಿ ಅವಧಿಯಾಗಿದ್ದು, (ಒಂದು ತಿಂಗಳು ಬೋಧನಾ ತರಬೇತಿ ಹಾಗೂ ಎರಡು ತಿಂಗಳುಗಳ ಪ್ರಾಯೋಗಿಕ ತರಬೇತಿ), ಸದರಿ ಅವಧಿಯಲ್ಲಿ ಮಾಸಿಕ ರೂ.1500/– ಪ್ರೋತ್ಸಾಹ ಧನವನ್ನು ಕಾರ್ಯಕರ್ತರಿಗೆ ನೀಡಲಾಗುತ್ತಿದೆ. ತರಬೇತಿ ಮುಗಿದ ನಂತರ, ಕಾರ್ಯಕರ್ತರು</td>
</tr>
</table>

		ಕೃತಕ ಗರ್ಭಧಾರಣೆ ಕಾರ್ಯವನ್ನು ಮುಂದುವರೆಸುತ್ತಿದ್ದಲ್ಲಿ ಮೊದಲ ವರ್ಷ ಮಾಸಿಕ ರೂ.1500/–, ಎರಡನೆಯ ವರ್ಷ ಮಾಸಿಕ ರೂ.1200/– ಹಾಗೂ ಮೂರನೆಯ ವರ್ಷ ಮಾಸಿಕ ರೂ.800/– ಗಳ ಟೇಪರಿಂಗ್ ಗ್ರಾಂಟ್ಸ್ ಅನ್ನು ಮೈತ್ರಿ ಕಾರ್ಯಕರ್ತರಿಗೆ ನೀಡಲಾಗುತ್ತಿದೆ,

ಪಸಂಮೀ ಇ–95 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು